11	ಬಳ್ಳಾರಿ	27
12	ಕೊಪ್ಪಳ	20
13	ಮೈಸೂರು	33
14	ಮಂಡ್ಯ	31
15	ಚಾಮರಾಜನಗರ	16
16	ಕೊಡಗು	16
17	ಹಾಸನ	38
18	ಚಿಕ್ಕಮಗಳೂರು	32
19	ಉಡುಪಿ	09
20	ದಕ್ಷಿಣ ಕನ್ನಡ	17
21	ಉತ್ತರ ಕನ್ನಡ	35
22	ಧಾರವಾಡ	14
23	ಬಿಜಾಪುರ	18
24	ಬಾಗಲಕೋಟೆ	18
25	ಹಾವೇರಿ	19
26	ಬೆಳಗಾಂ	35
27	ಗದಗ	11
	ಒಟ್ಟು	**739**

827 ಶ್ರೀ ಪಾಟೀಲ್ ಎಂ.ವೈ (ಅಫಜಲಪುರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಅಫ್‌ಜಲಪುರ ತಾಲ್ಲೂಕಿನಲ್ಲಿ ಅಂತರ್ಜಲ ಕುಸಿದು ಬೋರ್‌ವೆಲ್‌ಗಳ ಬಾವಿಗಳಲ್ಲಿ ನೀರಿಲ್ಲದೆ ಕುಡಿಯುವ ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅಫ್‌ಜಲಪುರ ತಾಲ್ಲೂಕಿನ ಕೆರೆಗಳ ನೀರನ್ನು ರೈತರ ಹೊಲಗಳಿಗೆ ನೀಡದೆ ಈ ಕೆರೆಗಳನ್ನು ಜಿನುಗು ಕೆರೆಗಳನ್ನಾಗಿ ಪರಿವರ್ತಿಸಿ ಅಂತರ್ಜಲ ಹೆಚ್ಚಿಸಲು ಸರ್ಕಾರ ಕಾರ್ಯಕ್ರಮಗಳನ್ನೇನಾದರೂ ರೂಪಿಸಿದೆಯೇ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು)

ಅ) ಬಂದಿದೆ.

ಆ) ಕೆರೆಗಳನ್ನು ಜಿನುಗು ಕೆರೆಗಳನ್ನಾಗಿ ಪರಿವರ್ತಿಸಿ ಅಂತರ್ಜಲ ಹೆಚ್ಚಿಸುವ ಕಾರ್ಯಕ್ರಮ ರೂಪಿಸಿರುವುದಿಲ್ಲ. ಆದರೆ, ಅಫ್‌ಜಲಪುರ ತಾಲ್ಲೂಕಿನಲ್ಲಿ ಬಳ್ಳೂರ್ಗಿ, ಕರಜಗಿ, ಬಡದಾಳ ಗ್ರಾಮಗಳ ಹತ್ತಿರ ಇಂಗು ಕೆರೆ ನಿರ್ಮಾಣ ಕಾಮಗಾರಿಯನ್ನು ಕೈಗೊಂಡಿದ್ದು, ಇದರಿಂದ ಅಂತರ್ಜಲ ಹೆಚ್ಚಾಗುವ ಸಹಕಾರಿಯಾಗುವುದು.

828 ಶ್ರೀ ಪಾಟೀಲ್ ಎಸ್.ಎಸ್.(ಮುಂಡರಗಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಮುಂಡರಗಿ ತಾಲ್ಲೂಕು ಗುಮ್ಮಗೋಳ ಗ್ರಾಮವನ್ನು ತುಂಗಭದ್ರಾ ನದಿ ಸುತ್ತು ಹಾಕಿ ಮುಳುಗಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಈ ಗ್ರಾಮವನ್ನು ಸ್ಥಳಾಂತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು(ವಿವರ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಸಿಂಗಟಾಲೂರ (ಹುಲಿಗುಡ್ಡ) ಏತ ನೀರಾವರಿ ಯೋಜನೆಯಡಿ ನೀರು ಸಂಗ್ರಹಣೆ ಪ್ರಾರಂಭವಾದಲ್ಲಿ ಗುಮ್ಮಗೋಳ ಗ್ರಾಮವು ಮುಳುಗಡೆಯಾಗುವ ಸಾಧ್ಯತೆ ಇರುತ್ತದೆ.

ಆ) ಗುಮ್ಮಗೋಳ ಗ್ರಾಮದ ಪುನರ್ ವಸತಿಗಾಗಿ ಒಟ್ಟು 50ಎ–04 ಗುಂಟೆ ಜಮೀನು ಭೂಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದ್ದು ಸದ್ಯಕ್ಕೆ ಈ ಪ್ರಕರಣವು ವಿಶೇಷ ಭೂಸ್ವಾಧೀನ ಅಧಿಕಾರಿಗಳು(ಸಿಂಗಟೂರ ಏತ ನೀರಾವರಿ ಯೋಜನೆ) ಹೂವಿನಹಡಗಲಿ ಇವರಲ್ಲಿ ಕಲಂ5(ಎ) ಪ್ರಕಾರ ಚೌಕಶಿ ಹಂತದಲ್ಲಿ ಇರುತ್ತದೆ.

829 (1240) ಶ್ರೀ ಪಾಟೀಲ್ ಎಸ್.ಎಸ್.(ಮುಂಡರಗಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದ ಹಣಕಾಸಿನ ಪರಿಸ್ಥಿತಿ ಹೇಗಿದೆ; ಉತ್ತಮವಾಗಿದೆಯೇ (ವಿವರ ನೀಡುವುದು);

ಆ) ಸಾರಾಯಿ ನಿಷೇಧದಿಂದ ಸರ್ಕಾರಕ್ಕೆ ಬರಬೇಕಾದ ಆದಾಯದ ಕೊರತೆ ಎಷ್ಟು ;

ಇ) ಇದನ್ನು ಯಾವ ಮೂಲಗಳಿಂದ ಭರಿಸಲು ಸರ್ಕಾರ ಕ್ರಮ ಕೈಗೊಂಡಿದೆ (ವಿವರ ನೀಡುವುದು)?

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು)

ಅ) ರಾಜ್ಯದ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿದೆ.